ಮಾಗಡಿ ವಿಧಾನಸಭೆ ಕ್ಷೇತ್ರದಲ್ಲಿ ಬಿಳ್ಳಬೆಳಕು ಯೋಜನೆ ಬಗ್ಗೆ.

74(268) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1996-97, 97-98, 98-99ನೇ ಸಾಲಿನಲ್ಲಿ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಆರಂಭಿಸಿದ ಹೊಸ ಹಾಸ್ಟೆಲ್‌ಗಳು ಯಾವುವು? (ವಿವರ ನೀಡುವುದು)

ಆ) 1996-97, 97-98, 98-99ನೇ ಸಾಲಿನಲ್ಲಿ ಬಿಳ್ಳಬೆಳಕು ಯೋಜನೆಯಡಿ ಮಾಗಡಿ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ಕಾಮಗಾರಿಗಳು ಯಾವುವು? ಇವುಗಳ ಮೊತ್ತವೆಷ್ಟು ಮತ್ತು ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಸಮಾಜ ಕಲ್ಯಾಣ ಇಲಾಖಾವತಿಯಿಂದ ಮಾಗಡಿ ವಿಧಾನಸಭಾ ಕ್ಷೇತ್ರಕ್ಕೆ 1996-1997 ಹಾಗೂ 98-99ನೇ ಸಾಲಿನಲ್ಲಿ ಯಾವುದೇ ವಿದ್ಯಾರ್ಥಿ ನಿಲಯಗಳು ಮಂಜೂರಾಗಿರುವುದಿಲ್ಲ. ಆದರೆ 1997-98ನೇ ಸಾಲಿನಲ್ಲಿ ಮಾಗಡಿ ವಿಧಾನಸಭಾ ಕ್ಷೇತ್ರದ ಕುಡೂರು ಗ್ರಾಮಕ್ಕೆ 50 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಮಂಜೂರಾಗಿದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾವತಿಯಿಂದ 1998-99ನೇ ಸಾಲಿನಲ್ಲಿ ಮಾಗಡಿ ತಾಲ್ಲೂಕಿನ ಅಜ್ಜನಹಳ್ಳಿ ಗೊಲ್ಲರಹಟ್ಟಿಯಲ್ಲಿ ಬಿಳ್ಳಬೆಳಕು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದ್ದು, ಈ ಕಾರ್ಯಕ್ರಮದಡಿ ಈ ಮುಂದೆ ಸೂಚಿಸಲಾದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

		ಲಕ್ಷ ರೂ.ಗಳಲ್ಲಿ
1)	ಮಸತಿ ಯೋಜನೆ (ಮನೆಗಳು 24) -	4.80
2)	ರಸ್ತೆ ನಿರ್ಮಾಣ -	1.00
3)	ಕಿರುನೀರು ಯೋಜನೆ -	2.75
4)	ಸಮುದಾಯ ಭವನ -	1.00
5)	ನೈರ್ಮಲೀಕರಣ -	1.00
6)	ವಿದ್ಯುದ್ದೀಕರಣ -	1.00
	ಒಟ್ಟು	ರೂ.11.55 ಲಕ್ಷಗಳು

1997-98 ಹಾಗೂ 1998-99ನೇ ಸಾಲಿನಲ್ಲಿ ಮೇಲ್ಕಂಡ ಕಾರ್ಯಕ್ರಮಗಳ ಪೈಕಿ ಮನೆಗಳನ್ನು ನಿರ್ಮಾಣ ಮಾಡಲು ಜಿಲ್ಲಾ ಸಮಿತಿಯು ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್, ಮಾಗಡಿ ಇವರಿಗೆ ವಹಿಸಲಾಗಿದೆ. ಹಾಗೂ ಉಳಿದ ಕಾಮಗಾರಿಗಳನ್ನು ಕಾರ್ಯಪಾಲಕ ಅಭಿಯಂತರರು ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗ ರಾಮನಗರಂ ಇವರಿಗೆ ವಹಿಸಲಾಗಿದ್ದು ಕೆಲಸವು ಪ್ರಗತಿಯಲ್ಲಿರುತ್ತದೆ.

ಮಾಗಡಿ ಪಟ್ಟಣದ ವ್ಯಾಪ್ತಿಯಲ್ಲಿ ಕೈಗೊಂಡ ರಸ್ತೆ ಚರಂಡಿ ಕಾಮಗಾರಿಗಳು.

75(335) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97, 97-98 ಮತ್ತು 98-99ನೇ ಸಾಲಿನಲ್ಲಿ ಮಾಗಡಿ ಟೌನ್ ವ್ಯಾಪ್ತಿಯಲ್ಲಿ ಕೈಗೊಂಡ ರಸ್ತೆ ಚರಂಡಿ ಕಾಮಗಾರಿಗಳು ಯಾವುವು ಹಾಗೂ ಇವುಗಳಿಗೆ ಈವರೆಗೆ ಖರ್ಚು ಮಾಡಿದ ಹಣ ಎಷ್ಟು (ಪ್ರತಿ ಸಾಲಿನಲ್ಲಿ ಕೈಗೊಂಡ ಕಾಮಗಾರಿಯ ಪೂರ್ಣ ವಿವರ ನೀಡುವುದು);

ಆ) 1996-97, 97-98 ಮತ್ತು 98-99ನೇ ಸಾಲಿನಲ್ಲಿ ಐಯುಡಿಪಿ, ಐಡಿಎಸ್‌ಎಂಟಿ ಹಾಗೂ 10ನೇ ಹಣಕಾಸು ಯೋಜನೆಯ ಕಾಮಗಾರಿಯ ವಿವರ ಒದಗಿಸುವುದು (ಪ್ರತಿ ಸಾಲಿನ ಕಾಮಗಾರಿಯ ವಿವರ ನೀಡುವುದು);

ಇ) ಈ ಕಾಮಗಾರಿಗಳಿಗೆ ಮೇಲ್ಕಂಡ ವರ್ಷಗಳಲ್ಲಿ ಖರ್ಚು ಮಾಡಿದ ಹಣ ಎಷ್ಟು; (ವರ್ಷವಾರು ವಿವರ ಒದಗಿಸುವುದು);

ಶ್ರೀ ಮೀರಾಜುದ್ದೀನ್ ಎಸ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) 1996-97, 97-98, 98-99ನೇ ಸಾಲಿನಲ್ಲಿ ಒಟ್ಟು 48 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಇದಕ್ಕಾಗಿ ಒಟ್ಟು ರೂ. 2,12,572-00 ಗಳನ್ನು ಖರ್ಚು ಮಾಡಲಾಗಿರುತ್ತದೆ. (ಪ್ರತಿ ಸಾಲಿನಲ್ಲಿ ಕೈಗೊಂಡ ಕಾಮಗಾರಿಯ ಪೂರ್ಣ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಆ) 1996-97,97-98 ಮತ್ತು 98-99ರ ಸಾಲಿನಲ್ಲಿ ಐಡಿಎಸ್‌ಎಂಟಿ ಯೋಜನೆಯಡಿಯಲ್ಲಿ ಒಟ್ಟು ರೂ. 1,55,668-00ಗಳ ಕಾಮಗಾರಿಗಳನ್ನು ಮಾಡಿಸಲಾಗಿರುತ್ತದೆ ಮತ್ತು 10ನೇ ಹಣಕಾಸು ಯೋಜನೆಯಡಿಯಲ್ಲಿ ಒಟ್ಟು ರೂ. 7-50 ಲಕ್ಷಗಳು ಬಿಡುಗಡೆಯಾಗಿದ್ದು, ಈ ಪೈಕಿ ರೂ. 4,04,239-00ಗಳ ಕಾಮಗಾರಿಯನ್ನು ಮಾಡಿಸಲಾಗಿದ್ದು, ಉಳಿದ ಹಣ ರೂ. 3,45,761-00 ಗಳಷ್ಟು ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. (ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.)

ಇ) ಈ ಕಾಮಗಾರಿಗಳಿಗೆ ಒಟ್ಟು ರೂ.10,53,323-00 ರಷ್ಟು ಖರ್ಚು ಮಾಡಲಾಗಿದೆ. (ವರ್ಷವಾರು ವಿವರಗಳನ್ನು ಅನುಬಂಧದಲ್ಲಿ ವಿವರಿಸಿದೆ.)